MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 9-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ವಯ ಪೌಷ್ಠಿಕಾಂಶಯುಕ್ತ ಅಕ್ಕಿ ವಿತರಣೆಗೆ ಕೇಂದ್ರ ಸರಕಾರ ನಿರ್ಧಾರ

ಸರಕಾರಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ವಯ ಪೌಷ್ಠಿಕಾಂಶಯುಕ್ತ (ವಿಟಮಿನ್, ಫೋಲಿಕ್ ಅಸಿಡ್, ಕಬ್ಬಿಣಾಂಶ ಮತ್ತಿತರ) ಅಕ್ಕಿ ವಿತರಣೆಗೆ ಕೇಂದ್ರ ಸರಕಾರ ಒಪ್ಪಿಗೆ ನೀಡಿದೆಯೆನ್ನಲಾಗಿದೆ. ಇದರನ್ವಯ ರೇಷನ್ ಶಾಪ್, ಮಧ್ಯಾಹ್ನದ ಬಿಸಿಯೂಟ ಇತ್ಯಾದಿ ಸರಕಾರಿಸಾರ್ವಜನಿಕ ವಿತರಣೆಗೆ ಪೌಷ್ಠಿಕಾಂಶಯುಕ್ತ ಅಕ್ಕಿ ದೊರೆಯಲಿದೆ.

## ಬೇಡಿಕೆ ಇಳಿಕೆ ನಿರೀಕ್ಷೆ, ಅಧಿಕ ಪೂರೈಕೆ ಕಾಫಿ ದರ ಇಳಿಕೆ

ವಿಯೆಟ್ನಾಂನ ಕಾಫಿ ರಫ್ತು ಜನವರಿಯಿಂದ ಮಾರ್ಚ ತಿಂಗಳಲ್ಲಿ 19 ಶೇಕಡಾ ಹೆಚ್ಚಳ ಕಂಡು (ಹಿಂದಿನ ವರ್ಷಕ್ಕೆ ಹೋಲಿಸಿದಾಗ) 541,000 ಮೆ.ಟನ್‌ಗಳಾಗಿವೆಯೆನ್ನಲಾಗಿದೆ. ರಷ್ಯಾ, ಉಕ್ರೈನ್ ಸಂಘರ್ಷದ ನಂತರ ಜಾಗತಿಕ ಅರ್ಥಿಕತೆಯ ಬದಲಾವಣೆಯಿಂದ ಕಾಫಿ ಬಳಕೆ ಇಳಿಕೆಯಾಗುವ ನಿರೀಕ್ಷೆ ಹಾಗೂ ಜಾಗತಿಕ ಪೂರೈಕೆ ಹೆಚ್ಚಳದಿಂದ ದರ ಇಳಿಕೆಯಾಗುತ್ತಿದ್ದು, ಬ್ರೆಜಿಲ್‌ನ ಅರೆಬಿಕಾ ಕಾಫಿ 2022–23 ರಲ್ಲಿ 32 ಶೇಕಡಾ ವೃದ್ಧಿಯಾಗಬಹುದೆನ್ನಲಾಗಿದೆ. ಅರೆಬಿಕಾ ಕಾಫಿ ಇನ್‌ವೆಂಟರಿ ದಾಸ್ತಾನು 2 ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳಗೊಂಡಿದೆ ಹಾಗೂ ರಾಬೆಸ್ಟಾ ಕಾಫಿ ಜಾಗತಿಕ ಇನ್‌ವೆಂಟರಿ ದಾಸ್ತಾನು 2 ತಿಂಗಳ ಗರಿಷ್ಠ ಮಟ್ಟಕ್ಕೇರಿದೆಯೆನ್ನಲಾಗಿದೆ. ಇದರಿಂದ ಜಾಗತಿಕ ಕಾಫಿ ದರ ಹಿನ್ನಡೆಯಾಗುವ ಸಾಧ್ಯತೆ ಇದೆ.